ಸಿಸಿ ನಂಃ 5587/2021

ಸಿ.ಡಬ್ಲೂ 9/ ಪಿಡಬ್ಲೂ 5

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ</u>**

**<u>ಧಾರವಾಡ.</u>**

**<u>ಸಿಸಿ ನಂಃ 5587/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಸಪ್ಪ ಬ್ಯಾಡರಕೊಪ್ಪ |
| ತಂದೆಯ ಹೆಸರು | ಃ | ಹನುಮಂತಪ್ಪ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ದುಮ್ಮಾಡ , ಧಾರವಾಡ . |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :** 17-10-2023

ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ

ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಗಳ ಗಂಡನಾಗಿರುವುದರಿಂದ ನನಗೆ ಅವರ ಪರಿಚಯ ಇದೆ . ನನ್ನ ಒಂದು ಮೋಟರ್ ಸೈಕಲ್ ಇದೆ . ಅದರ ನಂಬರ ನನಗೆ ಗೊತ್ತಿಲ್ಲ . ಆದರೆ ಅದು ಕಪ್ಪು ಬಣ್ಣದ್ದಾಗಿದೆ . ಅದು ಈಗ ನಾನು ನೋಡುತ್ತಿರುವ ನಿಶಾನೆ-ಪಿ-7 ಮತ್ತು 9 ರ ಫೋಟೋಗಳಲ್ಲಿರುವ ಮೋಟರ್ ಸೈಕಲ್ ಆಗಿದೆ . ಸದರಿ ನನ್ನ ಮೋಟರ್ ಸೈಕಲ್ ನ್ನು ನ್ಯಾಯಾಲಯದ ಮುಂದೆ ಇರುವ

ಸಿಸಿ ನಂಃ 5587/2021

ಸಿ.ಡಬ್ಲೂ 9/ಪಿಡಬ್ಲೂ 5

ಆರೋಪಿಯಾಗಿರುವ ನನ್ನ ಅಳಿಯನಿಗೆ ಮೂರು ವರ್ಷಗಳ ಹಿಂದೆ ಕೊಟ್ಟಿದ್ದೆ . ನನ್ನ ಮೋಟರ್ ಸೈಕಲ್ ಯಾವ ಕಾರಣಕ್ಕೆ ಜಪ್ತುಪಡಿಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ . ಆರೋಪಿತನ ವಿರುದ್ದ ಯಾವ ಕಾರಣಕ್ಕೆ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ . ನನ್ನ ಸದರಿ ಮೋಟರ್ ಸೈಕಲ್ ನಾನು ನ್ಯಾಯಲಯದ ಆದೇಶದಂತೆ ಪೋಲಿಸ್ ಠಾಣೆಯಿಂದ ಬಿಡಿಸಿಕೊಂಡಿರುತ್ತೇನೆ . ಆ ಕಾಲಕ್ಕೆ ಪೊಲಿಸರು ಪೋಟೋಗಳನ್ನು ತೆಗೆದಿದ್ದರು . ಅವುಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ನಿಶಾನೆ -ಪಿ-12 ರಿಂದ 14 ಎಂದು ಗುರುತಿಸಲಾಯಿತು .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 10-06-2021 ರಂದು ನನ್ನ ಅಳಿಯ ನನ್ನ ಮೋಟರ್ ಸೈಕಲ್ ನಂಃ ಕೆಎ-25/ಎಡ್ಡಿ-5524 ನೆದ್ದನ್ನು ತೆಗೆದುಕೊಂಡು ಹೋಗಿ ಮಃ 3.00 ಗಂಟೆಗೆ ತಾನು ಧಾರವಾಡದಿಂದ ಮರಳಿ ಊರಿಗೆ ಹೋಗುವಾಗ ಕಲಘಟಗಿ ರಸ್ತೆಯಲ್ಲಿ ಯಲ್ಲಾಪೂರಕ್ಕೆ ಹೋಗಲು ನಿಂತಿದ್ದ ಪರಮೇಶ್ವರ ಅವರಸಾ ಎನ್ನುವವರನ್ನು ಡ್ರಾಪ್ ಕೊಡುವುದಾಗಿ ಹೇಳಿ ಅವರನ್ನು ಮೋಟರ್ ಸೈಕಲ್ ಮೇಲೆ ಹತ್ತಿಸಿಕೊಂಡು ಹೋಗಿ ಎರಿಕೊಪ್ಪ ಗ್ರಾಮದ ಬ್ರಿಡ್ಜ

ಹತ್ತಿರ ಕರೆದುಕೊಂಡು ಹೋಗಿ ಅವರ ಹತ್ತಿರ ಇದ್ದ 5,000/- ಕಿತ್ತುಕೊಂಡು ಸದರಿ ಮೋಟರ್ ಸೈಕಲ್ ಮೇಲೆ ಹೋಗಿದ್ದ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿ . ನಾನು ನನ್ನ ಮೋಟರ್ ಸೈಕಲ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಪೋಲಿಸರ ಮುಂದೆ ಹಾಜರುಪಡಿಸಿದ್ದೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿ ಪರ ವಕೀಲರು ತಾನು ಪ್ರಕರಣದಿಂದ ನಿವೃತ್ತಿ ಹೊಂದಿರುವುದಾಗಿ ಮತ್ತು ಪಾಟೀಸವಾಲು ಮಾಡವುದಿಲ್ಲ ಎಂದು ಹೇಳಿದ್ದು , ಆರೋಪಿ ಸಹ ತನಗೆ ಯಾವುದೇ ಪ್ರಶ್ನೆ ಕೇಳುವುದು ಇಲ್ಲ ಎಂದು ಹೇಳಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .

**ಮರುವಿಚಾರಣೆ ಃ ಇಲ್ಲ** .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.